1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ. 115/2021

ದಿನಾಂಕ ಃ 30.07.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ದಿಃ 12.06.2020 ರಂದು ಚಾಸಾ.21 ಸಂದೇಶ್ ಪಟೇಲ್ ರವರ ಹೇಳಿಕೆಯನ್ನು ಪಡೆದುಕೊಂಡೆನು. ಅದೇ ದಿನ ಪಿರ್ಯಾದಿ ಚಾಸಾ.1 ಬೊರೇಗೌಡರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡೆನು. ದಿಃ 15.06.2020 ರಂದು ಅಮಾನತ್ತು ಪಡಿಸಿಕೊಂಡಿದ್ದ ವಸ್ತುಗಳನ್ನು ಎಫ್ ಎಸ್ ಎಲ್ ಗೆ ಚಾಸಾ.17 ಪ್ರದೀಪ್, ಮುಖ್ಯ ಪೇದೆವರೊಂದಿಗೆ ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟೆನು. ಆ ಮನವಿ ಪತ್ರವನ್ನು ನೋಡುತ್ತಿದ್ದು, ನಿಪಿ.30 ಎಂದು ಗುರುತಿಸಲಾಯಿತು. ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.30(ಎ) ಎಂದು ಗುರುತಿಸಲಾಯಿತು. ಅದೇ ದಿವಸ ಸಾಕ್ಷಿದಾರರಾದ ಚಾಸಾ.3 ರವರ ಹೇಳಿಕೆಯನ್ನು ಪಡೆದೆನು. ದಿಃ 20.06.2020 ರಂದು ಗಾಯಾಳು ಜಗದೀಶ್ ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡೆನು. ದಿಃ 10.07.2020 ರಂದು, ನಾಗಮಂಗಲ ಡಿವೈಎಸ್‌ಪಿ ರವರ ಮೂಲಕ ಆರ್ ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಆರ್ ಎಫ್ ಎಸ್ ಎಲ್ - ನಿಪಿ.27 ನ್ನು ಈಗ ನೋಡಿದ್ದು, ಅದರಲ್ಲಿ ರುವ ನನ್ನ ಸಹಿಯನ್ನು ನಿಪಿ.27(ಎ) ಎಂದು ಗುರುತಿಸಲಾಯಿತು. ಚಾಸಾ.17 ರವರಿಗೆ ಕೊಟ್ಟಿದ್ದ ಪಾಸ್‌ಪೋರ್ಟ್ ನ್ನು ಈಗ ನೋಡಿದ್ದು, ಅದನ್ನು ಈಗಾಗಲೇ ನಿಪಿ.19 ಎಂದು ಗುರುತಿಸಲಾಗಿದೆ. ನನ್ನ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ನಂತರ ದಿಃ14.08.2020 ರಂದು ಚಾಸಾ.2 ಗಾಯಾಳು ಸತೀಶ್‌ರವರ ಗಾಯದ ಪ್ರಮಾಣ ಪತ್ರವನ್ನು ಎ.ಸಿ. ಗಿರಿ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಹಾಗೂ ಎಂಎಲ್‌ಸಿ ರಿಜಿಸ್ಟರ್ ಎಕ್ಸ್‌ಟ್ರಾಕ್ಟ್‌ನ್ನು ಪಡೆದುಕೊಂಡಿರುತ್ತೇನೆ. ನಿಪಿ.14 ಗಾಯದ ಪ್ರಮಾಣ ಪತ್ರವನ್ನು ಈಗ ನೋಡಿದ್ದು, ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.14(ಬಿ)ಎಂದು ಗುರುತಿಸಲಾಯಿತು. ನಿಪಿ.15 ಎಂ ಎಲ್ ಸಿ ರಿಜಿಸ್ಟರ್ ಎಕ್ಸ್ ಟ್ರಾಕ್ಟ ನ್ನು ನೋಡಿದ್ದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.15(ಬಿ)ಎಂದು ಗುರುತಿಸಲಾಯಿತು. ನಂತರ ಅದೇ ದಿನ ವೈದ್ಯಾಧಿಕಾರಿಗಳಿಗೆ ಗಾಯಾಳುಗೆ ಆಗಿರುವ ಗಾಯ, ಕುಡುಗೋಲಿನಿಂದ ಹೊಡೆದರೆ ಆಗುತ್ತದೆಯಾ ಎಂದು ಅಭಿಪ್ರಾಯವನ್ನು ಕೇಳಿ ಮನವಿ ಪತ್ರವನ್ನು ಕೊಟ್ಟಿದ್ದೆನು. ಮನವಿ ಪತ್ರವನ್ನು ಈಡ್ಗಾಗಲೇ ನಿಪಿ. 16 ಎಂದು ಗುರುತಿಸಲಾಗಿದೆ. ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.16(ಬಿ)ಎಂದು ಗುರುತಿಸಲಾಯಿತು. ನಂತರ ದಿಃ 20.8.2020 ರಂದು ಗಾಯದ ಬಗ್ಗೆ ವೈದ್ಯರ ಅಭಿಪ್ರಾಯ ಪತ್ರವನ್ನು ಪಡೆದುಕೊಂಡೆನು. ಅದನ್ನು ನಿಪಿ.17 ಎಂದು ಗುರುತಿಸಲಾಗಿದೆ. ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.17(ಸಿ)ಎಂದು ಗುರುತಿಸಲಾಯಿತು.

2) ದಿಃ 10.10.2020 ರಂದು ಸಹಾಯಕ ಇಂಜಿನಿಯರ್, ವಿದ್ಯುತ್ ಚ್ಚಕ್ತಿ ಸರಬರಾಜು ನಿಗಮ, ಬೆಳ್ಳೂರು ಶಾಖೆ, ಇವರಿಗೆ ಕೃತ್ಯ ನಡೆದ ದಿನಾಂಕದಂದು, ಕೃತ್ಯ ನಡೆದ ಸ್ಥಳದಲ್ಲಿವಿದ್ಯುತ್ ಸರಬರಾಜು ಇದ್ದ ಬಗ್ಗೆ ಮನವಿ ಪತ್ರವನ್ನು ಸಲ್ಲಿಸಿಕೊಂಡಿದ್ದೆನು. ಅದನ್ನು ಈಗಾಗಲೇ ನಿಪಿ.28 ಎಂದು ಗುರುತಿಸಲಾಗಿದೆ. ನಂತರ ದಿಃ 12.10.2020 ರಂದು ಸಹಾಯಕ ಇಂಜಿನಿಯರ್,ವಿದ್ಯುತ್ ಚ್ಚಕ್ತಿ ಸರಬರಾಜು ನಿಗಮ, ಬೆಳ್ಳೂರು ಇವರಿಂದ, ಕೃತ್ಯ ನಡೆದ ದಿನಾಂಕದಂದು, ಕೃತ್ಯ ನಡೆದ ಸ್ಥಳದಲ್ಲಿ ವಿದ್ಯುತ್ ಸರಬರಾಜು ಇದ್ದ ಬಗ್ಗೆ ಕವಚ ಪತ್ರದೊಂದಿಗೆ ವರದಿ ಬಂದಿತ್ತು. ಅದನ್ನು ಈಗಾಗಲೇ ನಿಪಿ.29 ಎಂದು ಗುರುತಿಸಲಾಗಿದೆ. ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.29(ಸಿ)ಎಂದು ಗುರುತಿಸಲಾಯಿತು. ದಿಃ 28.12.2020 ರಂದು ತನಿಖೆ ಪೂರ್ಣಗೊಂಡ ಮೇರೆಗೆ, ಆರೋಪಿಯ ವಿರುದ್ದ ಆರೋಪ ಸಾಬೀತಾದ ಕಾರಣ, ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನಿಪಿ.11 ಮತ್ತು ನಿಪಿ.12 ಪಂಚರ ನೋಟಿಸನ್ನು ನೋಡಿದ್ದು, ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.11(ಸಿ) ಮತ್ತು ನಿಪಿ.12(ಬಿ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದಾರೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದ ಃ**

1) ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಳ್ಳುವುದಕ್ಕೆ ಆಸ್ಪತ್ರೆಗೆ ಹೋಗಿದ್ದೆನು. ನಿಪಿ.1 ಗಾಯಾಳುವಿನ ಹೇಳಿಕೆಯು, ಗಾಯಾಳುವಿನ ಕೈ ಬರಹದಲ್ಲಿ ಇಲ್ಲ ಎಂದರೆ ಸರಿ ಹಾಗೂ ಗಾಯಾಳುವನ್ನು ಕೇಳಿ ಸದರಿ ಹೇಳಿಕೆಯನ್ನು ಬರೆದಿರುತ್ತದೆ ಎಂದರೆ ಸರಿ. ಗಾಯಾಳುವಿಗೆ ಕೇಳಿದೆನು, ಆತನು ನೀಡಿದ ಹೇಳಿಕೆಯನ್ನು ನಮ್ಮ ಸಿಬ್ಬಂದಿಯಾದ ಪಿಸಿ 227 - ಶಶಿಧರ್ ರವರು, ಅವರ ಕೈ ಬರಹದಲ್ಲಿ ಬರೆದಿದ್ದರು. ಗಾಯಾಳುವಿನ ಹೇಳಿಕೆಯನ್ನು ದಿನಾಂಕ 06.06.2020 ರಂದು ಸಂಜೆ 6.30 ರಿಂದ 7.00 ಗಂಟೆ ಸಮಯದಲ್ಲಿ ಬರೆಯಲು ಶುರು ಮಾಡಲಾಯಿತು. ಗಾಯಾಳುವಿನ ಹೇಳಿಕೆಯನ್ನು ಎಷ್ಟು ಗಂಟೆಗೆ ತೆಗೆದುಕೊಳ್ಳಲು ಪ್ರಾರಂಭವಾಗಿತ್ತು ಮತ್ತು ಹೇಳಿಕೆ ಎಷ್ಟು ಗಂಟೆಗೆ ಮುಗಿಯಿತು ಅಂತ ಗಾಯಾಳುವಿನ ಹೇಳಿಕೆಯಲ್ಲಿ ಬರೆದಿಲ್ಲ ಎಂದರೆ ಸರಿ. ಗಾಯಾಳು ಹೇಳಿಕೆಯನ್ನು ಕೊಡುವಾಗ ವೈದ್ಯಾಧಿಕಾರಿಯಾದ ಡಾ.ರಾಜು ಇದ್ದರು. ಡಾ. ರಾಜು ರವರನ್ನು, 14 ನೇ ಸಾಕ್ಷಿದಾರರಾಗಿ ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿದ್ದೇನೆ. ನಿಪಿ.1 ಗಾಯಾಳು ಹೇಳಿಕೆಯಲ್ಲಿ ಇರುವ ಡಾ.ರಾಜು ಎಂಬ ಸಹಿ, ಚಾಸಾ.14 ಸಾಕ್ಷಿದಾರರ ಸಹಿ ಆಗಿರುತ್ತದೆ. ನಿಪಿ.1 ಗಾಯಾಳು ಹೇಳಿಕೆಯಲ್ಲಿ, ಸಹಿ ಮಾಡಿರುವ ಡಾ.ರಾಜು, ವೈದ್ಯಾಧಿಕಾರಿಯವರೇ ಬೇರೆ, ದೋಷಾರೋಪಣ ಪಟ್ಟಿಯಲ್ಲಿ

ಕಾಣಿಸಿರುವ ಚಾಸಾ.14 ರವರಾದ ಡಾ. ರಾಜು ರವರೇ ಬೇರೆ ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಇರುವ ಡಾ. ರಾಜು ಎಂಬ ರುಜು, ಚಾಸಾ14 - ಡಾ. ರಾಜು ರವರದ್ದಲ್ಲ ಎಂದರೆ ಸರಿಯಲ್ಲ. ದೋಷಾರೋಪಣ ಪಟ್ಟಿಯಲ್ಲಿ ಇರುವ ಚಾಸಾ.14 – ಡಾ. ರಾಜು ರವರಲ್ಲ, ಅದು ಡಾ. ನಟರಾಜು ಎಂದರೆ ಸರಿಯಲ್ಲ. ನಿಪಿ.1 ಗಾಯಾಳು ಹೇಳಿಕೆಯಲ್ಲಿ. ಡಾ. ನಟರಾಜು, ವೈದ್ಯಾಧಿಕಾರಿಯವರ ಸಹಿ ಇದೆಯಾ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಡಾ. ರಾಜು ರವರ ಸಹಿ ಇದೆ, ಡಾ. ನಟರಾಜು ರವರ ಸಹಿ ಇಲ್ಲ ಎಂದು ಹೇಳುತ್ತಾರೆ. ಚಾಸಾ.1 ರಿಂದ 3 ರವರ ಮಾತನ್ನು ಕೇಳಿಕೊಂಡು, ಗಾಯಾಳುವಿನ ಹೇಳಿಕೆಯನ್ನು ನಿಪಿ.1 ನ್ನು ನಾನೇ ಸೃಷ್ಟಿ ಮಾಡಿಕೊಂಡಿದ್ದೇನೆ ಹಾಗೂ ಅದನ್ನು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಳ್ಳಲು, ಮನವಿ ಪತ್ರವನ್ನು ವೈದ್ಯರಿಗೆ ಕೊಟ್ಟಿದ್ದು ದಿಃ 06.06.2020 ರಂದು ಸಂಜೆ 7.00 ಗಂಟೆಯಲ್ಲಿ ಕೊಟ್ಟಿದ್ದೆನು. ನಿಪಿ.22 ದಾಖಲೆಯಲ್ಲಿ ಇರುವ ಸ್ವೀಕೃತಿ ಸಮಯ 06.06.2020 ಸಂಜೆ 7.00 ಗಂಟೆ ಅಂತ ಇದೆ ಎಂದರೆ ಸರಿ. ನಿಪಿ.1 ಗಾಯಾಳುವಿನ ಹೇಳಿಕೆಯಲ್ಲಿ, ಹೇಳಿಕೆಯನ್ನು ಬರೆದು ಮುಗಿದ ಮೇಲೆ, ಸದರಿ ಹೇಳಿಕೆಯ ಕೆಳಗಡೆ, ಎಡಭಾಗದಲ್ಲಿ '' 06.06.2020, 7.00 pm '' ಅಂತ ಬರೆದಿದೆ ಎಂದರೆ ಸರಿ.

2) ಚಾಸಾ.1 ರವರು ನೀಡಿರುವಂತಹ ದೂರು, ಲಿಖಿತ ದೂರು ಎಂದರೆ ಸರಿ. ಲಿಖಿತ ದೂರನ್ನು ಬರರೆದವರು ಯಾರು ಅಂತ ನಾನು ಚಾಸಾ.1 ರವರಿಗೆ ಕೇಳಲಿಲ್ಲ. ದೂರನ್ನು ಬರೆದುಕೊಟ್ಟಿದ್ದ ವ್ಯಕ್ತಿಯನ್ನು ಸಾಕ್ಷಿಯನ್ನಾಗಿ ಮಾಡಿಲ್ಲ ಎಂದರೆ ಸರಿ.ಚಾಸಾ2 ಗಾಯಾಳು ಸತೀಶ ರವರು, ಕೃಷ್ಣಾಪುರ ಗ್ರಾಮದಲ್ಲಿ ವಾಸ ಇರುವ ಬಗ್ಗೆ , ವಾಸದ ದೃಢೀಕರಣ ಪತ್ರವನ್ನು ದೋಷಾರೋಪಣ ಪಟ್ಟಿಯೊಂದಿಗೆ ಹಾಜರು ಪಡಿಸಿಲ್ಲ ಎಂದರೆ ಸರಿ. ಚಾಸಾ.2 ಗಾಯಾಳು, ವಾಸವಾಗಿದ್ದ ಮನೆಯ ಮಾಲೀಕರು ಯಾರು ಅಂತ ವಿಚಾರಣೆ ಮಾಡಲಿಲ್ಲ ಹಾಗೂ ಮಾಲಿಕರುನ್ನು ಸಾಕ್ಷಿಯನ್ನಾಗಿ ಮಾಡಲಿಲ್ಲ. ಚಾಸಾ.2 ಗಾಯಾಳು, ಅವರ ಹೇಳಿಕೆಯಲ್ಲಿ, ಕೃತ್ಯ ನಡೆದ ಸ್ಥಳವನ್ನು,ಚಾಸಾ.1 ಬೋರೇಗೌಡರಿಗೆ ತೋರಿಸಿದೆನು ಅಂತ ಹೇಳಿಲ್ಲ. ಚಾಸಾ.2 ಗಾಯಾಳು, ಅವರ ಹೇಳಿಕೆಯಲ್ಲಿ, ಎ.ಸಿ. ಗಿರಿ ಆಸ್ಪತ್ರೆಯಲ್ಲಿ ವೈದ್ಯರು, ಅವರಿಗೆ ಚಿಕಿತ್ಸೆಯನ್ನು ನೀಡುವಾಗ, ಅವರು ಧರಿಸಿಕೊಂಡಿದ್ದ ರಕ್ತವಾಗಿದ್ದ ಬಟ್ಟೆಗಳನ್ನು ತೆಗೆದು, ಚಾಸಾ.1 ಬೋರೇಗೌಡರಿಗೆ ಕೊಟ್ಟಿದ್ದೇನೆ ಅಂತ ಹೇಳಿಕೆಯಲ್ಲಿ ಹೇಳಿಲ್ಲ.

3) ಕುಡಗೋಲನ್ನು, ಗಾಯಾಳು ಚಾಸಾ 2 -ಸತೀಶ ವರಿಗೆ ತೋರಿಸಿದೆನು ಅಂತ ದೋಷಾರೋಪಣ ಪಟ್ಟಿ ಯಲ್ಲಿ ನಮೂದು ಆಗಿರುವುದಿಲ್ಲ. ಕುಡುಗೋಲನ್ನು, ಚಾಸಾ.2 ಗಾಯಾಳುವಿನ ಮುಂದೆ ವಶಪಡಿಸಿಕೊಂಡಿಲ್ಲ. ಪಿರ್ಯಾದಿಯವರ ಮುಂದೆ ವಶಪಡಿಸಿಕೊಂಡಿದ್ದೆನು. ಚಾಸಾ.2 ಗಾಯಾಳುವಿಗೆ ಕುಡಗೋಲಿನಿಂದ ಹೊಡೆದಿದ್ದರಾ ಅನ್ನುವುದರ ಬಗ್ಗೆ,

ಗಾಯಾಳುವಿಗೆ ವಿಚಾರಣೆ ಮಾಡಿಲ್ಲ ಎಂದರೆಸರಿಯಲ್ಲ. ಕುಡಗೋಲನ್ನು, ಚಾಸಾ.2 ಗಾಯಾಳುವಿಗೆ ನಾನು ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ, ಆರೋಪಿಯ ಸಮ್ಮುಖದಲ್ಲಿ ಕುಡಗೋಲನ್ನು ವಶಪಡಿಸಿಕೊಂಡಿಲ್ಲ. ಕುಡ್ಲು, ಕುಡಗೋಲು ಮತ್ತು ಜವಳಿ ಕುಡಗೋಲು, ಬೇರೆ ಬೇರೆ ವಸ್ತುಗಳು ಎಂದರೆ ಸರಿ. ಮುಮಾ.3 ಜವಳಿ ಕುಡಗೋಲನ್ನು, ಈ ಕೇಸಿಗೋಸ್ಕರ, ಜವಳಿ ಕುಡಗೋಲು ಅಂತ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು, ನನಗೆ ಸ್ವ ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಕೇಸಿಗಾಗಿ ಸ್ವ ಇಚ್ಛಾ ಹೇಳಿಕೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳವನ್ನು ಆರೋಪಿಯು ನನಗೆ ತೋರಿಸಿರಲಿಲ್ಲ ಎಂದರೆ ಸರಿಯಲ್ಲ. ಕೇಸಿಗೋಸ್ಕರ ಕೃತ್ಯ ನಡೆದ ಸ್ಥಳ ಅಂತ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಮಹಜರ್ ನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಕೇಸಿಗಾಗಿ ಸುಳ್ಳು ಮಹಜರನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ. 3 ಮಹಜರ್ ಮತ್ತು ನಿಪಿ.10 ಮಹಜರ್ ಗಳಲ್ಲಿ ಅವುಗಳನ್ನು, ಬರೆದಿರುವ ಸಿಬ್ಬಂದಿಗಳ ಹೆಸರು , ಸಹಿ ಮತ್ತು ಇಲಾಖೆಯ ಮೆಟಲ್ ನಂಬರ್ ಗಳು ಇಲ್ಲ ಎಂದರೆ ಸರಿ.ಈ ನಿಪಿ. 3 ಮಹಜರ್ ಮತ್ತು ನಿಪಿ.10 ಮಹಜರ್ ನಾನೇ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ಚಾಸಾ.2 ಸತೀಶ್ ರವರ ಹೇಳಿಕೆಯನ್ನು ಶ್ರೀಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ ಹಾಗೂ ಅದನ್ನು ನಾನೇ ಠಾಣೆಯಲ್ಲಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ವೈದ್ಯರಿಗೆ ಗಾಯಾಳುವಿನ ಹೇಳಿಕೆಯನ್ನು ಪಡೆದುಕೊಳ್ಳಲು ಕೊಟ್ಟಿದ್ದ ನಿಪಿ.2 ಮನವಿ ಪತ್ರದಲ್ಲಿ ಮತ್ತು ಗಾಯಾಳುವಿನ ಹೇಳಿಕೆಯಾದ ನಿಪಿ.1 ರಲ್ಲಿ ಇರುವ ದಿನಾಂಕ ಮತ್ತು ಸಮಯ ಒಂದೇ ತರಹದ್ದು ಆಗಿರುತ್ತದೆ ಎಂದರೆ ಸರಿ. ಆರೋಪಿ ಯಾವುದೇ ತಪ್ಪನ್ನು ಮಾಡಿಲ್ಲದೇ ಇದ್ದರೂ ಸಹ ಚಾಸಾ.1 ರಿಂದ 3 ರವರ ಸುಳ್ಳು ಮಾತು ಕೇಳಿಕೊಂಡು, ಆರೋಪಿಗೆ ತೊಂದರೆ ಕೊಡಬೇಕೇಂಬ ದುರುದ್ದೇಶದಿಂದ ಆರೋಪಿ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂರದೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ ಹಾಗೂ ಸಾಕ್ಷಿ ರವರ ಹೇಳಿಕೆ ಅಂತ ಹೇಳಿಕೆಗಳನ್ನು ಕೇಸಿಗಾಗಿ ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.4 ರಿಂದ 9 ಫೋಟೋಗಳನ್ನು ಯಾರು ತೆಗೆರದರು ಅಂತ ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿಲ್ಲ ಎಂದರೆ ಸರಿ .ಈ ಫೋಟೋಗಳನ್ನು ತೆಗೆದಿದ್ದ ವ್ಯಕ್ತಿಯನ್ನು, ಸಾಕ್ಷಿಯಾಗಿ ಮಾಡಿಲ್ಲ. ಆರೋಪಿ ಏನು ಕೆಲಸ ಮಾಡುತ್ತಾರೆ, ಎಲ್ಲಿ ವಾಸ ಇದ್ದಾರೆ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು, ಆರೋಪಿ ಬೆಂಗಳೂರಿನಲ್ಲಿ ವಾಸ ಇದ್ದಾರೆ ಹಾಗೂ ಅಲ್ಲಿ ಮಹೇಶ್ ಪಿಯು ಕಾಲೇಜಿನಲ್ಲಿ ಕೆಲಸ ಮಾಡುತ್ತಾರೆ. 1 ರಿಂದ 5 ಮುದ್ದೇಮಾಲುಗಳನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಗಾಯಾಳು ಚಸಾ.2 ರವರ ಮರು ಹೇಳಿಕೆಯನ್ನು

ಪಡೆದಿರಲಿಲ್ಲ ಎಂದರೆ ಸರಿಯಲ್ಲ ಹಾಗೂ ಇದನ್ನು ಸುಳ್ಳಾಗಿ ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಮರು ಹೇಳಿಕೆಯನ್ನು ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗಾಗಿ ಚಾಸಾ.1 ರವರ ಮರು ಹೇಳಿಕೆಯನ್ನು ಸೃಷ್ಟಿಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

4) ಚಾಸಾ. 1 ರವರು ಕೊಟ್ಟಿದ್ದ ದೂರಿನ ಪ್ರಕಾರ, ಗಲಾಟೆ ನಡೆದಿದ್ದ ಸಮಯ ರಾತ್ರಿ 10.30 ರಿಂದ 11.00 ಗಂಟೆ ಒಳಗೆ ಆಗಿತ್ತು. ಚಾಸಾ.1 ಕೊಟಿದ್ದ ಹೇಳಿಕೆಯ ಪ್ರಕಾರ, ಗಲಾಟೆ ನಡೆದಿದ್ದ ಸಮಯ, ರಾತ್ರಿ 10.50 ನಿಮಿಷ. ನಿಪಿ.14 ಗಾಯದ ಪ್ರಮಾಣ ಪತ್ರದಲ್ಲಿ, ಗಲಾಟೆ ನಡೆದಿದ್ದ ಸಮಯ ರಾತ್ರಿ 10.30 ಗಂಟೆ ಅಂತ ಇದೆ ಎಂದರೆ ಸರಿ. ದೋಷಾರೋಪಣ ಪಟ್ಟಿಯ ಪ್ರಕಾರ ಗಲಾಟೆ ನಡೆದಿದ್ದ ಸಮಯ ರಾತ್ರಿ 10.50. ಪಿರ್ಯಾದಿ ಕೊಟ್ಟಿರುವ ದೂರಿನ ಪ್ರಕಾರ, ಗಲಾಟೆ ನಡೆದಿದ್ದ ಸಮಯ ರಾತ್ರಿ 10.50 ಇದ್ದು, ಗಾಯಾಳು ಚಾಸಾ 2 ರವರು ಕೊಟ್ಟಿದ್ದ ಹೇಳಿಕೆಯಲ್ಲಿ, ಗಲಾಟೆ ನಡೆದಿದ್ದ ಸಮಯ ರಾತ್ರಿ 10.30 ಇದ್ದು, ನಿಪಿ.14 ಗಾಯಾದ ಪ್ರಮಾಣ ಪತ್ರದಲ್ಲಿ ಗಲಾಟೆ ನಡೆದಿದ್ದ ಸಮಯ ರಾತ್ರಿ 10.30 ಇದ್ದು ಹಾಗೂ ದೋಷಾರೋಪಣ ಪಟ್ಟಿಯಲ್ಲಿ ಗಲಾಟೆ ನಡೆದಿದ್ದ ಸಮಯ ರಾತ್ರಿ 10.50 ಅಂತ ಇರುವುದರಿಂದ, ಇವುಗಳ ಬಗ್ಗೆ ತನಿಖಾ ಸಮಯದಲ್ಲಿ, ಈ ರೀತಿ ಗಲಾಟೆ ನಡೆದಿದ್ದ ಸಮಯ ವ್ಯತ್ಯಾಸ ಇದ್ದ ಬಗ್ಗೆ, ನಾನು ತನಿಖೆಯನ್ನು ಮಾಡಲಿಲ್ಲ.

5) ದಿಃ 04.06.2020 ರಂದು, ರಾತ್ರಿ 10.50 ಗಂಟೆಯಲ್ಲಿ ಗಲಾಟೆ ನಡೆದಿದ್ದಾಗ, ಗಾಯಾಳು ಚಾಸಾ.2 ರವರು ಕೃಷ್ಣಾಪುರ ಗ್ರಾಮದಲ್ಲಿ ವಾಸವಾಗಿದ್ದ ಬಾಡಿಗೆ ಮನೆಗೆ ವಿದ್ಯುತ್ ಸರಬರಾಜು ಇತ್ತಾ, ಇಲ್ಲವಾ ಎನ್ನುವುದರ ಬಗ್ಗೆ ವರದಿಯನ್ನು ತರಿಸಿಕೊಂಡಿದ್ದೆನು. ಚಾಸಾ.2 ಗಾಯಾಳು, ಕೃಷ್ಣಾಪುರ ಗ್ರಾಮದಲ್ಲಿ ವಾಸವಾಗಿದ್ದ, ಕೆಂಪೇಗೌಡ - ಮಾಲೀಕರಿಗೆ ಸೇರಿದ ಬಾಡಿಗೆ ಮನೆಗೆ, ಗಲಾಟೆ ನಡೆದಿದ್ದ ಸಮಯದಲ್ಲಿ, ವಿದ್ಯುತ್ ಸರಬರಾಜು ಇತ್ತು ಎಂದು ಚಾಸಾ.23 – ಹೇಮ ರವರು ವರದಿಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ.2 ಗಾಯಾಳು ವಾಸವಾಗಿದ್ದ, ಕೆಂಪೇಗೌಡರ ಮಾಲೀಕತ್ವದಲ್ಲಿ ಇದ್ದ ಬಾಡಿಗೆ ಮನೆಯ ಮೀಟರ್ ನ ಆರ್ ಆರ್ ನಂಬರ್ ನ್ನು ನಿಪಿ.28 ರಲ್ಲಿ ನಮೂದು ಮಾಡಿಲ್ಲ.

6) ದಿಃ 04.06.2020 ರಂದು, ಗಲಾಟೆ ನಡೆದಿದ್ದ ದಿನ ಮತ್ತು ಸಮಯದಲ್ಲಿ, ಆರೋಪಿಯು, ಬೆಂಗಳೂರಿನ ಡೋರ್ ನಂಃ 123/1, 3rd main road, 2nd cross, Ranganathapura, Kamakshipalya ದಲ್ಲಿ ವಾಸ ಇದ್ದರು ಹಾಗೂ ಕೃಷ್ಣಾಪುರ ಗ್ರಾಮ, ಬೆಳ್ಳೂರು ಹೋಬಳಿ, ನಾಗಮಂಗಲ ತಾಲ್ಲೂಕಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿಃ 04.06.2020 ರಂದು, ಕೋವಿಡ್ - 19 ವೈರಸ್ ನಿಂದಾಗಿ, lock down ಆಗಿತ್ತು ಮತ್ತು ಜನ ಸಂದಣಿ ಇರಲಿಲ್ಲ ,

ವಾಹನ ಸಂಚಾರಗಳು ಇರಲಿಲ್ಲ ಎಂದರೆ ಸರಿಯಲ್ಲ. ತನಿಖಾ ವೇಳೆಯಲ್ಲಿ ಆರೋಪಿ, ಯಾವ ವಾಹನದದಿಂದ ಬೆಂಗಳೂರಿನಿಂದ ಕೃಷ್ಣಾಪುರ ಗ್ರಾಮ ಕ್ಕೆಬಂದಿದ್ದರು ಮತ್ತು ವಾಪಸ್ ಯಾವ ವಾಹನದಲ್ಲಿ ಹೋಗಿದ್ದರು ಎಂಬುದು ಕಂಡು ಬಂದಿರಲಿಲ್ಲ ಹಾಗೂ ಈ ವಿಚಾರವನ್ನು ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿರುವುದಿಲ್ಲ. ಚಾಸಾ.2 ಗಾಯಾಳು ಸತೀಶ್ ರವರು, ಕೃಷ್ಣಾಪುರ ಗ್ರಾಮದಲ್ಲಿ ಕೆಂಪೇಗೌಡರಿಗೆ ಸೇರಿದ ಬಾಡಿಗೆ ಮನೆಯಲ್ಲಿ ವಾಸ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ.2 ಗಾಯಾಳು ಸತೀಶ್ ರವರು, ಕೆಂಪೇಗೌಡ ರ ಮನೆಯಲ್ಲಿ ಬಾಡಿಗೆಗೆ ಇರುವ ಬಗ್ಗೆ ಬಾಡಿಗೆ ಕರಾರು ಅಥವಾ ಇನ್ನಿತರ ದಾಖಲೆಗಳನ್ನು ತನಿಖಾ ವೇಳೆಯಲ್ಲಿ ಸಂಗ್ರಹಿಸಿಕೊಂಡಿಲ್ಲ.ಚಾಸಾ.2 ಗಾಯಾಳು ಸತೀಶ್ ರವರು, ಕೆಂಪೇಗೌಡ ರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದ ಪಕ್ಷದಲ್ಲಿ, ಬಾಡಿಗೆ ಕರಾರು ಹಾಗ ಇನ್ನಿತರ ಬಾಡಿಗೆಗೆ ಸೇರಿದ ದಾಖಲೆಗಳನ್ನು ಚಾಸಾ.2 ರವರಿಂದ, ಸಂಗ್ರಹಿಸಿಕೊಂಡು, ದೋಷಾರೋಪಣ ಪಟ್ಟಿಯೊಂದಿಗೆ ಸೇರಿಸುತ್ತಿದ್ದೆನು ಎಂದರೆ ಸಾಕ್ಷಿಯು, ಚಾಸಾ 2 ರವರು ಆ ಬಾಡಿಗೆ ಮನೆಯಲ್ಲಿ ವಾಸ ಇದ್ದಾರೆ ಆದರೆ ಯಾವುದೇ ಬಾಡಿಗೆ ಕರಾರು ಅಥವಾ ದಾಖಲೆಯನ್ನು ನಾನು ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಚಾಸಾ.2 ಗಾಯಾಳು ಸತೀಶ್ ರವರು, ಕೃಷ್ಣಾಪುರ ಗ್ರಾಮದಲ್ಲಿ ವಾಸ ಇದ್ದ ಬಗ್ಗೆ ಸಂಬಂಧಪಟ್ಟಿದ್ದ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಅಥವಾ ಪಿ ಡಿ ಓ ರವರಿಗೆ ಪತ್ರ ವ್ಯವಹಾರ ನಡೆಸಿ ಚಾಸಾ.2 ಗಾಯಾಳು ಸತೀಶ್ ರವರ ವಾಸದ ದೃಡೀಕರಣ ಪತ್ರವನ್ನು ಪಡೆದುಕೊಳ್ಳುವುದಕ್ಕೆ ನನಗೆ ಯಾವುದೇ ತೊಂದರೆ ಇರಲಿಲ್ಲ. ಚಾಸಾ.2 ಗಾಯಾಳು ಸತೀಶ್ ರವರು, ಕೃಷ್ಣಾಪುರ ಗ್ರಾಮದಲ್ಲಿ ವಾಸ ಇಲ್ಲದೇ ಇರುವುದರಿಂದ, ನಾನು ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಅಥವಾ ಪಿ ಡಿ ಓ ರವರಿಗೆ , ಚಾಸಾ .2 ರವರ ವಾಸದ ದೃಡೀಕರಣ ಪತ್ರವನ್ನು ಕೋರಿ ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

7) ಚಾಸಾ .2 ಗಾಯಾಳು ಸತೀಶ್ ರವರಿಗೆ ತೆಂಗಿನ ತೋಟ ಇದೆ ಎಂದರೆ ಸರಿ. ಮು.ಮಾ.3 ಜವಳಿ ಕುಡಗೋಲನ್ನು ತೆಂಗಿನ ಕಾಯಿ ಕೀಳುವುದಕ್ಕೆ ಬಳಸುತ್ತಾರೆ ಎಂದರೆ ಸರಿ. ಚಾಸಾ .2 ಗಾಯಾಳು ಸತೀಶ್ ರವರು,ತೋಟದಲ್ಲಿ ತೆಂಗಿನ ಕಾಯಿಗಳನ್ನು, ಮುಮಾ.3 ಜವಳಿ ಕುಡಗೋಲಿನಿಂದ ಕೀಳುವ ಸಮಯದಲ್ಲಿ,ಜವಳಿ ಕುಡಗೋಲು, ಅವರ ಮೇಲೆ ಬಿದ್ದು, ಗಾಯ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ತೆಂಗಿನ ಕಾಯಿಗಳನ್ನು ಕೀಳುವ ಸಮಯದಲ್ಲಿ, ಜವಳಿ ಕುಡಗೋಲು , ಚಾಸಾ .2 ಗಾಯಾಳು ಸತೀಶ್ ರವರ ಮೇಲೆ ಬಿದ್ದು ಉಂಟಾಗಿದ್ದ ಗಾಯಗಳನ್ನು, ಚಾಸಾ. 2 ಮತ್ತು ಚಾಸಾ 3 ರವರು, ಚಾಸಾ 1 ರವರೊದಿಗೆ ಶರೀಕಾಗಿ, ಚಾಸಾ.1 ರವರಿಂದ ಸುಳ್ಳು ದೂರನ್ನು ಕೂಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು, ಬೆಂಗಳೂರಿನ ಮಹೇಶ್ ಪಿಯು ಕಾಲೇಜಿನಲ್ಲಿ ಕೆಲಸ ಮಾಡುತ್ತಿರುದರಿಂದ,

ಅವರ ಕೆಲಸಕ್ಕೆ ತೊಂದರೆ ಉಂಟು ಮಾಡುವ ದುರುದ್ದೇಶದಿಂದ, ಚಾಸಾ 2 ಮತ್ತು 3 ರವರು , ಶರೀಕಾಗಿ , ಚಾಸಾ .1 ರ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯಲ್ಲಿ , ಆರೋಪಿಯ ತಂದೆಗೆ ಭಾಗ ಕೊಡುವುದನ್ನು ಮುಂದೂಡಿಸುವ ಉದ್ದೇಶಕ್ಕಾಗಿ , ಚಾಸಾ. 2 ಮತ್ತು 3 ರವರು ಚಾಸಾ .1 ರ ಮೂಲಕ ಸುಳ್ಳು ದೂರನ್ನು ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯು, ಯಾವುದೇ ಅವಾಚ್ಯ ಶಬ್ದಗಳಿಂದ ಚಾಸಾ. 2 ರವರನ್ನು ನಿಂದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ, ಚಾಸಾ 2 ರವರಿಗೆ ಯಾವುದೇ ಕೊಲೆ ಬೆರಿಕೆ ಹಾಕಿಲ್ಲ ಎಂದರೆ ಸರಿಯಲ್ಲ, ಆರೋಪಿ, ಚಾಸಾ. 2 ರವರಿಗೆ ಯಾವುದೇ ಹಲ್ಲೆಯಾಗಲೀ ಅಥವಾ ಮಾರಣಾಂತಿಕ ಹಲ್ಲೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ, ಆರೋಪಿ ನಿರಪರಾಧಿ ಮತ್ತು ಯಾವುದೇ ಆರೋಪವನ್ನು ಮಾಡಿರುವುದು ಕಂಡು ಬಂದಿಲ್ಲದೇ ಇದ್ದರೂ ಸಹ ನಾನು ಚಾಸಾ1 ರಿಂದ 3 ರವರ ಜೊತೆ ಶರೀಕಾಗಿ ಸುಳ್ಳು ದೋಷಾರೋಪಣ ಪಟ್ಟಿಯನ್ನು ಆರೋಪಿಯ ವಿರುದ್ಧ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ.21 ಸಂದೇಶ್ ಪಟೇಲ್ ರವರ ಹೇಳಿಕೆಯನ್ನು ದಾಖಲು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ಸಿಬ್ಬಂದಿಗಳು, ಆರೋಪಿಯನ್ನು ತಲಾಷ್ ಮಾಡಲು ಹೋಗಿದ್ದ ಸಮಯದಲ್ಲಿ, ಆರೋಪಿಯು, ಬೆಂಗಳೂರಿನ ಡೋರ್ ನಂಃ 123/1, 3rd main road, 2nd cross, Ranganathapura, Kamakshipalya ದಲ್ಲಿ ವಾಸ ಇದ್ದರು ಎಂದರೆ ಸರಿ. ವಶ ಪಡಿಸಿಕೊಂಡಿದ್ದ ವಸ್ತುವನ್ನು ಎಫ್.ಎಸ್.ಎಲ್. ಮೈಸೂರಿಗೆ ನಮ್ಮ ಸಿಬ್ಬಂದಿಯಾದ ಚಾಸಾ.17 ಪ್ರದೀಪ್ ಮೂಲಕ ಕಳುಹಿಸಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.30 ಮನವಿ ಪತ್ರವನ್ನು ಈ ಕೇಸಿಗಾಗಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚಾಸಾ.3 ಲಕ್ಷ್ಮಿದೇವಮ್ಮ ರವರ ಹೇಳಿಕೆಯನ್ನು ಈ ಕೇಸಿಗಾಗಿ ಸೃಷ್ಟಿಸಿಕೊಂಡಿದ್ದೇನೆ ಹಾಗೂ ಅವರಿಂದ ಹೇಳಿಕೆಯನ್ನು ಪಡೆದುಕೊಂಡಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.2 ಗಾಯಾಳುವಿನ ಬಟ್ಟೆಯನ್ನು ಹಾಜರು ಪಡಿಸಬೇಕು ಅಂತ ಹೇಳಿ ನಾನು, ಚಾಸಾ.1 ಬೋರೇಗೌಡರಿಗೆ ನೋಟಿಸನ್ನು ಕೊಟ್ಟಿರಲಿಲ್ಲ. ಗಾಯಾಳು ಚಾಸಾ.2 ಸತೀಶ್ ರವರ ರಕ್ತ ಪರೀಕ್ಷೆ ಮಾಡಿಸಲು, ನ್ಯಾಯಾಲಯದ ಅನುಮತಿಯನ್ನು ಪಡೆದುಕೊಂಡಿಲ್ಲ. ಚಾಸಾ2. ಗಾಯಾಳು ಸತೀಶ್ ವರಿಗೆ ಶ್ರೀ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಿದಾಗ ಆಸ್ಪತ್ರೆಯವರು, ಅವರ ರಕ್ತದ ಗುಂಪನ್ನು B positive ಅಂತ ಕೊಟ್ಟಿದ್ದಾರೆ. ಬಿ ರಕ್ತದ ಗುಂಪಿನಲ್ಲಿ B positive ಮತ್ತು ಬಿ negative ಅಂತ ಇದೆ ಎಂದರೆ ಸರಿ. ಶ್ರೀ ಲಕ್ಷ್ಮೀ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೊಟ್ಟಿರುವ ಚಾಸಾ.2 ಗಾಯಾಳುವಿನ ರಕ್ತದ ಗುಂಪು B positive ಅಂತ ಇದೆ ಮತ್ತು ನಿಪಿ.27 ಎಫ್ ಎಸ್ ಎಲ್ ವರದಿಯಲ್ಲಿ B group ಅಂತ ಇದೆ ಎಂದರೆ ಸರಿ, ಆದಕಾರಣ ನಿಪಿ.27 ಎಫ್ ಎಸ್ ಎಲ್ ವರದಿಯಲ್ಲಿ, ಹೇಳಿರುವ ರಕ್ತದ ಗುಂಪು ಬೇರೆ ಮತ್ತು ಶ್ರೀ ಲಕ್ಷ್ಮೀ ಮಲ್ಟಿ

ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕೊಟ್ಟಿರುವ ಚಾಸಾ.2 ರವರ ರಕ್ತದ ಗುಂಪು ಬೇರೆ ಬೇರೆಯಾಗಿದೆ ಎಂದರೆ ಸಾಕ್ಷಿಯು, ನಿಪಿ.27 ಎಫ್ ಎಸ್ ಎಲ್ ವರದಿಯಲ್ಲಿ B group blood ಅಂತ ತಪ್ಪಾಗಿದೆ ಎನ್ನುತ್ತಾರೆ.

8) ನಿಪಿ.27 ಎಫ್ ಎಸ್ ಎಲ್ ವರದಿಯ serial No.1 ರಿಂದ 4 ರಲ್ಲಿ ನಮೂದಿಸಿರುವ articles ಮೇಲೆ (ಅಂದರೆ ಮುಮಾ.1 –ಟೀ ಶರಟು, ಮುಮಾ -2 ಬರ್ಮುಡ ಚಡ್ಡಿ, ಮುಮಾ3 - ಕುಡಗೋಲು, ಮುಮಾ5 - ರಕ್ತವಾಗಿರುವ ಮಣ್ಣು) ಇರುವ ರಕ್ತದ ಕಲೆಯ, ರಕ್ತದ ಗುಂಪು B group ಎಂದು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಹಾಗೂ B positive ಅಂತ ಅಭಿಪ್ರಾಯವನ್ನು ಕೊಟ್ಟಿಲ್ಲ ಎಂದರೆ ಸರಿ.

(ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಕ್ತಾಯಗೊಂಡಿದ್ದರಿಂದ, ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು)

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

SC 115/2021, PW19

ದಿನಾಂಕ ಃ 30.07.2024 ರಂದು ಪುನಃ ಮಧ್ಯಾಹ್ನ ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಗಿದೆ.

**ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದ ಃ**

1) ನಿಪಿ. 14 ಗಾಯದ ಪ್ರಮಾಣಪತ್ರದಲ್ಲಿ ಹಾಗೂ ನಿಪಿ.15 Accident register extract ನಲ್ಲಿ, ಎಂ ಎಲ್ ಸಿ ಅಂತ ಎಲ್ಲಿಯೂ ಬರೆದಿಲ್ಲ ಎಂದರೆ ಸಾಕ್ಷಿಯು, ಇದನ್ನು ಸಂಬಂಧಪಟ್ಟಿರುವ ವೈದರಿಗೆ ಕೇಳಬೇಕಾಗುತ್ತದೆ ಎಂದು ಉತ್ತರಿಸುತ್ತಾರೆ. ಶ್ರೀ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಚಾಸಾ 2 ಗಾಯಾಳುವಿನ ಗಾಯದಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೆನು. ಇದನ್ನು ಪಡೆದುಕೊಂಡಿರುವ ಬಗ್ಗೆ ಸಂಬಂಧಪಟ್ಟ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಶ್ರೀ ಲಕ್ಷ್ಮೀ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ

ಪಡೆದುಕೊಂಡಿದ್ದ ಚಾಸಾ 2 ಗಾಯಾಳುವಿನ ಗಾಯದ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಸಹ ದೋಷಾರೋಪಣ ಪಟ್ಟಿಯಲ್ಲಿ ಸಲ್ಲಿಸಿರುವುದಿಲ್ಲ. ಚಾಸಾ 1 ರಿಂದ 3 ರವರ ಚಿತಾವಣೆ ಮೇರೆಗೆ, ವೈದ್ಯಾಧಿಕಾರಿಯವರ ಮೇಲೆ ಪ್ರಭಾವ ಬೀರಿ ನಿಪಿ.14 ನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮುಮಾ.3 ಜವಳಿ ಕುಡುಗೋಲನ್ನು ಸಹ ಕೇಸಿಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ರಿಂದ 5 ನ್ನು ಕೇಸಿಗಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.1 ರಿಂದ 30 ದಾಖಲಾತಿಗಳನ್ನು, ಆರೋಪಿಗೆ ತೊಂದರೆ ಕೊಡಬೇಕು ಅಂತ ಹೇಳಿ ಸುಳ್ಳಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ.8 ನಾರಾಯಣ ರವರು ನನ್ನ ಮುಂದೆ ನೀಡಿರುವ ಹೇಳಿಕೆಯಲ್ಲಿ ''ನಾನು ಮತ್ತು ನಾಗರಾಜು ಇಬ್ಬರೂ ಸತೀಶ್ ನನ್ನು ಆ್ಯಂಬುಲೆನ್ಸ್ ನಲ್ಲಿ ಬೆಂಗಳೂರಿನ ಶ್ರೀ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಚಿಕಿತ್ಸೆ ದಾಖಲಿಸಿರುವ ವಿಚಾರ ಗೊತ್ತಾಯಿತು'' ಅಂತ ಹೇಳಿದ್ದಾರೆ. ಚಾಸಾ.9 ಶಂಕರೇಗೌಡವರು ನನ್ನ ಮುಂದೆ ನೀಡಿರುವ ಹೇಳಿಕೆಯಲ್ಲಿ ''ನಾನು ಮತ್ತು ನಾಗರಾಜು ಇಬ್ಬರೂ ಸತೀಶ್ ನನ್ನು ಆ್ಯಂಬುಲೆನ್ಸ್ ನಲ್ಲಿ ಬೆಂಗಳೂರಿನ ಶ್ರೀ ಲಕ್ಷ್ಮೀ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಚಿಕಿತ್ಸೆ ದಾಖಲಿಸಿರುವ ವಿಚಾರ ಗೊತ್ತಾಯಿತು'' ಅಂತ ಹೇಳಿದ್ದಾರೆ. ಚಾಸಾ.8 ನಾರಾಯಣ ಅಥವಾ ಚಾಸಾ 9 ರವರು ಯಾವುದೇ ಹೇಳಿಕೆಯನ್ನು ನನ್ನ ಮುಂದೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅವರ ಹೇಳಿಕೆಯನ್ನು ನಾನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ತನಿಖಾ ವೇಳೆಯಲ್ಲಿ ಆರೋಪಿ ಯಾವುದೇ ತಪ್ಪನ್ನು ಮಾಡದೇ ಇರುವುದು ಕಂಡು ಬಂದಿದ್ದರೂ ಸಹ, ಚಾಸಾ.1 ರಿಂದ 3 ರವರ ಮಾತು ಕೇಳಿಕೊಂಡು, ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಗಲಾಟೆಯ ಸಮಯದಲ್ಲಿ, ಚಾಸಾ 2 ಗಾಯಾಳುರವರು, ಚಾಸಾ 1 ರವರ ಮನೆಗೆ ಓಡಿ ಹೋಗಿದ್ದಾಗ , ಚಾಸಾ 1 ರವರ ಮನೆಯಲ್ಲಿ ಯಾರು ಯಾರು ಇದ್ದರು ಎನ್ನುವುದರ ಬಗ್ಗೆ ದೋಷಾರೋಪಣ ಪಟ್ಟಿಯಲ್ಲಿ ನಮೂದು ಇಲ್ಲ.

**<u>ಸರ್ಕಾರಿ ಅಭಿಯೋಜಕರು ಸಾಕ್ಷಿಯ ಮುಂದವರೆದ ಮುಖ್ಯ ವಿಚಾರಣೆಗೆ ಮುಕ್ತಿಕವಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿದ್ದು, ನೀಡಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದಃ</u>**

1) ತನಿಖಾ ವೇಳೆಯಲ್ಲಿ, ಚಾಸಾ.2 ಸತೀಶ ಗಾಯಾಳುವಿನ discharge summery ಯನ್ನು ಸಂಗ್ರಹಿಸಿಕೊಂಡಿದ್ದು, ಅದನ್ನು ಈಗ ನೋಡಿದ್ದು ನಿಪಿ.31 ಎಂದು, ಇದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.31(ಎ) ಎಂದು ಗುರುತಿಸಲಾಯಿತು. ಘಟನಗೆ ಸಂಬಂಧಪಟ್ಟಂತೆನಮ್ಮ ಸಿಬ್ಬಂದಿ ತೆಗೆದಿದ್ದ ಫೋಟೋಗಳ ಬಗ್ಗೆ ನಾನು ನೀಡಿರುವ ಕಲಂ 65(ಬಿ) Indian Evidence Act

ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ.32 ಎಂದು, ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ.32(ಎ)ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎನ್ ಎನ್ ವಕೀಲರಿಂದ ಃ**

1) ಡಾ.ಕುಮಾರ್ ರವರು, ನಿಪಿ.31 discharge summery ಯನ್ನು ಮಂಜೂರು ಮಾಡಿದ್ದಾರೆ. ಡಾ.ಕುಮಾರ್ ರವರನ್ನು, ದೋಷಾರೋಪಣ ಪಟ್ಟಿಯಲ್ಲಿ ಸಾಕ್ಷಿಯಾಗಿ ಮಾಡಿಲ್ಲ. ಇವರನ್ನು ಸಾಕ್ಷಿಯಾಗಿ ಮಾಡವುದಕ್ಕೆ ತೊಂದರೆ ಇರಲಿಲ್ಲ. ನಿಪಿ.31 discharge summery ಯಲ್ಲಿ, ಯಾವುದೇ ಎಕ್ಸ್ರೇ ವರದಿ ಅಥವಾ ಸ್ಕಾನಿಂಗ್ ವರದಿ ಬಗ್ಗೆ ಬರೆದಿಲ್ಲ ಎಂದರೆ ಸರಿ. ನಿಪಿ.31 discharge summery ಯನ್ನು ಶ್ರೀ ಲಕ್ಷ್ಮೀ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯವರೊಂದಿಗೆ ಶಾಮೀಲಾಗಿ ಸುಳ್ಳಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ.32 ಕಲಂ 65(ಬಿ) Indian Evidence Act ಪ್ರಮಾಣ ಪತ್ರವನ್ನು ಸಹ ಕೇಸಿನ ಅನುಕೂಲಕ್ಕಾಗಿ ಸುಳ್ಳಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.